ಅಮಾನತುಗೊಳಿಸಲಾಗಿದೆ ಎಂದು ಪತ್ರಿಕೆಯಲ್ಲಿ ಬಂದಿದೆ. ಇದನ್ನು ತಾವು ಗಂಭೀರವಾಗಿ ಚಿಂತನೆ ಮಾಡಿ, ವಿಚಾರಣೆ ಮಾಡಬೇಕು, ಮತ್ತು ಯಾರ ಮನೆಯಲ್ಲಿ ಅವರನ್ನು ಉಳಿಸಿಕೊಂಡಿದ್ದರು, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ, ಒಂದು ವೇಳೆ ಕ್ರಮ ತೆಗೆದುಕೊಂಡಿರದಿದ್ದರೆ ಕೂಡಲೇ ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಅದರ ಜೊತೆಗೆ ಕೊಡಗಿನ ಕರ್ಕೆ ಮತ್ತು ವಿರಾಜಪೇಟೆ ಮುಖಾಂತರವಾಗಿ ಕೇರಳದಿಂದ ಬಂದಂತಹ ಜನರು ನೆಲೆಸಿದ್ದಾರೆ. ಅವರು ಐ.ಎಸ್.ಐ.ಗೆ ಸೇರಿದಂತವರು ಎಂದು ಪತ್ರಿಕೆಯಲ್ಲಿ ಬಂದಿದೆ. ಆದಕಾರಣ ಆದಷ್ಟು ಬೇಗ ಅವರ ಮೇಲೆ ಕ್ರಮ ತೆಗೆದುಕೊಂಡು, ಅವರ ವಿಚಾರವಾಗಿ ಕೂಲಂಕಷವಾಗಿ ಚರ್ಚೆ ಮಾಡಿ, ಈ ವಿಚಾರವನ್ನು ಗಾಂಭೀರ್ಯದಿಂದ ತೆಗೆದುಕೊಂಡು ಇದಕ್ಕೆ ಉತ್ತರ ಕೊಡಬೇಕೆಂದು ಗೃಹ ಮಂತ್ರಿಯವರನ್ನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಶ್ರೀ ನಾಗೇಗೌಡರು ಇದರ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಈ ದಿವಸ ಅಥವಾ ನಾಳೆ ಇದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ತರಿಸಿ ಕೊಡುತ್ತೇವೆ.

5) ಗಮನ ಸೆಳೆಯುವ ಸೂಚನೆ

ವಿಷಯ: ರಾಜ್ಯದಲ್ಲಿ ಮುಂಗಾರು ಮತ್ತು ಹಿಂಗಾರಿನ ಮಳೆ ಬಾರದೆ ಬೆಳೆಗಳು ಹಾಳಾಗಿರುವುದರಿಂದ ದೀರ್ಘಾವಧಿ ಮತ್ತು ಅಲ್ಪಾವಧಿ ಸಾಲಕ್ಕೆ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ.

ಶ್ರೀ ಡಿ.ಆರ್.ಪಾಟೀಲ್ (ಗದಗ್): ಸನ್ಮಾನ್ಯ ಉಪಾಧ್ಯಕ್ಷರೆ, ಹೋದ ವರ್ಷ ಮುಂಗಾರು ಮತ್ತು ಹಿಂಗಾರು ಮಳೆ ಸಾಕಷ್ಟು ಬಾರದೆ ಬೆಳೆಗಳು ಹಾಳಾಗಿ ರೈತಾಪಿ ಜನರಿಗೆ ಸಾಕಷ್ಟು ತೊಂದರೆಯಾಗಿದೆ. ಅವರು ಪಡೆದುಕೊಂಡಿರುವಂತಹ ದೀರ್ಘಾವಧಿ ಸಾಲವಾಗಲಿ, ಅಲ್ಪಾವಧಿ ಸಾಲವಾಗಲಿ ಅದನ್ನು ತಿರೀಸುವಂತಹ ಸ್ಥಿತಿಯಲ್ಲಿ ಅವರು ಇಲ್ಲ. ಆದುದರಿಂದ ಈ ಎರಡೂ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿ, ಈ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಿ, ಮುಂದಿನ ಮುಂಗಾರು ಮತ್ತು ಹಿಂಗಾರು ದಿವಸದಲ್ಲಿ ಬೆಳೆ ಸಾಲ ಸಿಗುವಂತೆ ವ್ಯವಸ್ಥೆ ಮಾಡುವುದಕ್ಕೆ ಸಹಕಾರ ಸಚಿವರ ಗಮನವನ್ನು ಸೆಳೆಯುತ್ತೇನೆ.

+ ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ರಾಜ್ಯದಲ್ಲಿರುವ ಹಲವಾರು ತಾಲ್ಲೂಕುಗಳು ಮುಂಗಾರು ಮತ್ತು ಹಿಂಗಾರು ಮಳೆ ಸಾಕಷ್ಟು ಬಾರದೇ ಬರ ಪೀಡಿತಕ್ಕೆ ಒಳಪಟ್ಟಿರುವುದು ಸಹಕಾರ ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಬರ ಪೀಡಿತ ಪ್ರದೇಶಕ್ಕೆ ಒಳಪಟ್ಟಿರುವ ರೈತರು ಸಹಕಾರ ಸಂಘಗಳಿಂದ ಪಡೆದಿರುವ ಸಾಲ ಮತ್ತು

ಅದರ ಬಡ್ಡಿಯನ್ನು ಮನ್ನಾ ಮಾಡಲು ಅವಕಾಶ ಇರುವುದಿಲ್ಲ. ಆದಾಗ್ಯೂ ಬರ ಪೀಡಿತ ಪ್ರದೇಶದ ರೈತರ ತೊಂದರೆಗಳನ್ನು ಹಾಗೂ ಸಂಕಷ್ಟಗಳನ್ನು ಮನಗಂಡು ಇಂತಹ ಪ್ರದೇಶಗಳಲ್ಲಿ ರೈತರು ಸಹಕಾರಿ ಸಂಘಗಳಿಂದ ಪಡೆದಿರುವ ಕೃಷಿ ಸಾಲದ ವಸೂಲಾತಿಯನ್ನು ಬರುವ ಜೂನ್ 1998ರ ಅಂತ್ಯದವರೆಗೆ ಸ್ಥಗಿತಗೊಳಿಸಲು ಮತ್ತು ಕಂದಾಯ ಇಲಾಖೆಯು ಅಣೆವಾರಿಯನ್ನು ಘೋಷಿಸಿದಂತ ತಾಲ್ಲೂಕುಗಳಲ್ಲಿ, ರೈತರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಪಡೆದಿರುವ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗಿದೆ. ಸಾಲ ಪರಿವರ್ತನೆಯಿಂದಾಗಿ ಮುಂದಿನ ಸಾಲಿನಲ್ಲಿ ರೈತರು ಅಲ್ಪಾವಧಿ ಸಾಲ ಪಡೆಯಲು ಅರ್ಹರಾಗುತ್ತಾರೆ.

+ ಶ್ರೀ ಡಿ.ಆರ್.ಪಾಟೀಲ್: ಸಹಕಾರ ಸಂಘಗಳಿಂದ ಪಡೆದಿರುವಂತಹ ಸಾಲವನ್ನು ಜೂನ್ 1998ರವರೆಗೆ ವಸೂಲಿ ಮಾಡುವುದನ್ನು ಸ್ಥಗಿತಗೊಳಿಸಿದ್ದೇವೆ ಎಂದು ಹೇಳುತ್ತೀರಿ. ಏಕೆಂದರೆ ಜೂನ್ 98 ರವರೆಗೆ ಹಿಂಗಾರಿನೂ ಬಂದಿಲ್ಲ, ಮುಂಗಾರಿನೂ ಬಂದಿಲ್ಲ, ಹೀಗಿರುವಾಗ ಹಣ ಕಟ್ಟಲು ಹೇಗೆ ಸಾಧ್ಯವಾಗುತ್ತದೆ? ಆದಕಾರಣ, ಮುಂದಿನ ಮಾರ್ಚಿ 1999ರವರೆಗೆ ಸ್ಥಗಿತಗೊಳಿಸುವ ವ್ಯವಸ್ಥೆ ಮಾಡಬೇಕು. ಮುಂಗಾರಿ ಅಣೇವಾರಿನೇ ಇನ್ನೂ ಬಂದಿಲ್ಲ, ಹಿಂಗಾರಿ ಅಣೇವಾರಿ ಬರುವ ಹಾಗಿಲ್ಲ ಈಗ ಮುಂಗಾರಿ ಬಂದಿಲ್ಲ ಎಂದು ಹೇಳಿ ಹಿಂಗಾರಿ ಬೆಳೆದವರು ತೊಂದರೆಯಲ್ಲಿ ಇರುತ್ತಾರೆ. ಆದರೆ ಮಳೆ ಏನಾದರೂ ಚೆನ್ನಾಗಿ ಬಂದರೆ ಮುಂಗಾರಿ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಆದಕ್ಕೆ ಅಣೇವಾರಿ ನೀವು ನೋಡದೆಯೇ, ನಿಮಗೆ ಬರುವ ವರದಿಗಳು ಬೇರೆ ಬೇರೆ ರೀತಿ ಇರುತ್ತವೆ. ಆದಕಾರಣ ಎಲ್ಲಾ ಸಾಲವನ್ನು ಮಧ್ಯಮಾವಧಿ ಸಾಲ ಎಂದು ಪರಿವರ್ತನೆ ಮಾಡಿ ಮುಂಗಾರಿಗೆ ಮತ್ತು ಹಿಂಗಾರಿಗೆ ಬೆಳೆ ಸಾಲ ಸಿಗುವಂತೆ ವ್ಯವಸ್ಥೆ ತಾವು ಮಾಡಬೇಕು.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಉಪಾಧ್ಯಕ್ಷರೇ, ನಾವು ಇದನ್ನು ನಬಾರ್ಡ್ ನಿಯಮದ ಪ್ರಕಾರ ಮಾಡಬೇಕಾಗುತ್ತದೆ. ಆ ಕಾರಣದಿಂದ ಜೂನ್‌ವರೆವಿಗೂ ಮುಂದೆ ಹಾಕಿದ್ದೇವೆ. ಅಂದರೆ ನಾವು ಅಷ್ಟರಲ್ಲೇ ಪರಿವರ್ತನೆ ಮಾಡಿ ರೈತರಿಗೆ ಸಾಲ ಸಿಗುವಂತೆ ವ್ಯವಸ್ಥೆ ಮಾಡುತ್ತೇವೆ. ದುರ್ದೈವದಿಂದ ಜೂನ್ ಒಳಗೆ ಪರಿವರ್ತನೆ ಮಾಡುವುದಕ್ಕೆ ಆಗದಿದ್ದರೆ ಮುಂದಿನ ಮಾರ್ಚಿನವರೆವಿಗೂ ಕೂಡ ನಾವು ಸಾಲ ವಸೂಲಾತಿಯನ್ನು ಮುಂದೂಡುತ್ತೇವೆ ಎಂಬ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಜೆ.ಟಿ.ಪಾಟೀಲ್: ಸನ್ಮಾನ್ಯ ಉಪಾಧ್ಯಕ್ಷರೇ, ಅಲ್ಪಾವಧಿಸಾಲ, ದೀರ್ಘಾವಧಿ ಸಾಲದ 1998-99ರ ಸಾಲಿನ ವಸೂಲಾತಿಯನ್ನು ಸ್ಥಗಿತಗೊಳಿಸಿರುವ ವ್ಯವಸ್ಥೆಯನ್ನು ದಯಮಾಡಿ ಮಾಡಿ. ಅದರಲ್ಲಿ ಚಿಕ್ಕ ರೈತರು, ದೊಡ್ಡ ರೈತರು ಎಂಬ ಭೇದ-ಭಾವ ಮಾಡಬಾರದು. ಏಕೆಂದರೆ ಚಿಕ್ಕ ರೈತರಿರಲಿ, ದೊಡ್ಡ ರೈತರಿರಲಿ ಅವರ-ಅವರ

ಮಟ್ಟದಲ್ಲಿ ಹಾನಿಯಾಗಿದೆ. ಸಹಕಾರ ಸಂಘದ ವ್ಯಾಪ್ತಿಯಲ್ಲಿ ಬರತಕ್ಕಂತಹ ಯಾವುದೇ ರೀತಿಯಲ್ಲಿ ಅವರಿಗೆ ಲಾಭ ಬರಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಆದಕಾರಣ ಅದಕ್ಕೆ ಸಂಬಂಧಪಟ್ಟಂತಹ ಮಂತ್ರಿಗಳು ಅದರ ಬಗ್ಗೆ ವಿವರಣೆ ನೀಡಬೇಕು.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಉಪಾಧ್ಯಕ್ಷರೆ, ಈ ಒಂದು ವಿಚಾರದಲ್ಲಿ ಸಣ್ಣ ರೈತ, ದೊಡ್ಡ ರೈತ ಎಂಬ ತಾರತಮ್ಯವಿಲ್ಲ. ಎಲ್ಲಾ ರೈತರ ಸಾಲವನ್ನು ಪರಿವರ್ತನೆ ಮಾಡುತ್ತೇವೆ, ವಸೂಲಾತಿಯನ್ನು ನಿಲ್ಲಿಸುತ್ತೇವೆ. ಇನ್ನೊಂದು ವಿಷಯವನ್ನು ಹೇಳಬೇಕು ಎಂದರೆ, ಬಹಳ ಬರ ಬಿದ್ದಿರುವುದರಿಂದ ಇನ್‌ಷ್ಯೂರೆನ್ಸ್ ಸಿಗುವ ಸಂಭವವಿದೆ. ಅದನ್ನೂ ಕೂಡ ತರಿಸುವಂತಹ ಪ್ರಯತ್ನ ಮಾಡುತ್ತೇವೆ.

ಶ್ರೀ ಮಂಜುನಾಥ್ ಸಿ.ಕುನ್ನೂರ್: ಈಗಾಗಲೇ ಮುಂಗಾರಿ ಮತ್ತು ಹಿಂಗಾರಿ ಮಳೆ ಬಾರದೆ ಇರುವುದರಿಂದ ರಾಜ್ಯದಲ್ಲಿ ಹಲವಾರು ಕಡೆ ತೊಂದರೆಯಾಗಿದೆ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ. ಈ ಅವಧಿಯನ್ನು ಜೂನ್ 1998ರವರೆಗೆ ಮಾತ್ರ ವಿಸ್ತರಿಸಿದ್ದಾರೆ, ಅದರ ಬದಲಾಗಿ ಡಿಸೆಂಬರ್ ತಿಂಗಳವರೆವಿಗೆ ತಾವು ವಿಸ್ತರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಈಗಾಗಲೇ ಅಣೇವಾರಿ ಬಗ್ಗೆ ಹೇಳಿದ್ದಾರೆ. ಮಾನ್ಯ ಶ್ರೀ ಡಿ.ಆರ್.ಪಾಟೀಲ್ ಅವರು ಹೇಳಿದಂತೆ ಅಣೇವಾರಿ ಪದ್ಧತಿಯನ್ನು ಇನ್ನೂ ಕೆಲವು ತಾಲ್ಲೂಕುಗಳಲ್ಲಿ ಘೋಷಣೆ ಮಾಡಿಲ್ಲ. ಅಣೇವಾರಿ ಪದ್ಧತಿಯನ್ನು ಯಾವ ಆಧಾರದ ಮೇಲೆ ಮಾಡುತ್ತಿದ್ದಾರೆ ಎನ್ನುವುದನ್ನು ನಾವೆಲ್ಲರೂ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಅಣೇವಾರಿಯನ್ನು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಎಲ್ಲೋ ಕುಳಿತು ಯಾವುದೇ ರೀತಿಯಲ್ಲಿ ಮಾಡತಕ್ಕಂತಹದ್ದು ಇದೆ. ಇದನ್ನು ತಾಲ್ಲೂಕುವಾರು ತೆಗೆದುಕೊಳ್ಳುತ್ತಿದ್ದಾರೋ ಅಥವಾ ಹೋಬಳಿವಾರು ತೆಗೆದುಕೊಳ್ಳುತ್ತಿದ್ದಾರೋ, ಇದರ ಬಗ್ಗೆ ಕೂಡ ಸಹಕಾರ ಇಲಾಖೆಯವರು ಅದಕ್ಕೆ ಸಂಬಂಧ ಇಲ್ಲದೆ ಇದ್ದರೂ ಕೂಡ ಈ ಒಂದು ವ್ಯವಸ್ಥೆಯಲ್ಲಿ ರೆವಿನ್ಯೂ ಇಲಾಖೆಗೆ ನೇರವಾಗಿ ಸಂಬಂಧ ಇರುವುದರಿಂದ ಇದರ ಜೊತೆಗೆ ಚರ್ಚಿಸಿ, ಈ ಅಣೇವಾರಿ ಪದ್ಧತಿಯನ್ನು ತಾವು ಸರಿಯಾಗಿ ಬದಲಾವಣೆ ಮಾಡಿಸಿ ಇದರ ಅನುಕೂಲತೆಯನ್ನು ಮಾಡಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಉಪಾಧ್ಯಕ್ಷರೆ, ಅಣೆವಾರಿ ಪದ್ಧತಿ ಹಿಂದಿನಿಂದ ನಡೆದು ಬಂದಂತಹ ಒಂದು ಪದ್ಧತಿ. ಅದನ್ನು ಪ್ರತಿ ಗ್ರಾಮವೈಸ್ ಮಾಡುತ್ತಿದ್ದೇವೆ. ಅದೇನೂ ತಾಲ್ಲೂಕ್‌ವೈಸ್ ಅಲ್ಲ. ಇನ್‌ಶ್ಯೂರೆನ್ಸ್ ನವರು ಮಾತ್ರ ತಾಲ್ಲೂಕ್‌ವೈಸ್ ಮಾಡುತ್ತಿದ್ದಾರೆ. ಅಣೆವಾರಿ ಮಾತ್ರ ಪ್ರತಿ ಗ್ರಾಮವೈಸ್ ಮಾಡುತ್ತೇವೆ. ಅದನ್ನು ಖಂಡಿತವಾಗಿ ತೀವ್ರದಲ್ಲಿ ತರಿಸಿ ರೈತರಿಗೆ ಅನುಕೂಲ ಮಾಡಿಕೊಡುತ್ತೇವೆ.

ಶ್ರೀ ಮಂಜುನಾಥ್ ಸಿ.ಕುನ್ನೂರ್: ಯಾವುದೋ ಒಂದು ಹಳ್ಳಿಯಲ್ಲಿ ಮಾಡಿ ಅದನ್ನೇ ಇಟ್ಟುಕೊಳ್ಳತಕ್ಕಂಥ ಸಂಪ್ರದಾಯ ನಡೆದಿದೆ. ಅದನ್ನು ಬದಲಾವಣೆ ಮಾಡಿ ತಾವು ಪ್ರತಿ ಗ್ರಾಮದ ವರದಿ ತರಿಸಿಕೊಟ್ಟರೆ ನಮಗೆ ಬಹಳ ಸಂತೋಷವಾಗುತ್ತದೆ.

ಅದಕ್ಕೆ ಆ ದೃಷ್ಟಿಯಿಂದ ಈ ಪದ್ಧತಿಯನ್ನು ತಾವು ಸರಿಪಡಿಸಬೇಕು ಎಂದು ಹೇಳುತ್ತೇನೆ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಸಚಿವರು ಬೆಳೆ ವಿಮೆಯ ಬಗ್ಗೆ ಪ್ರಸ್ತಾಪ ಮಾಡಿದರು. ಸಹಕಾರಿ ಸಂಘದಿಂದ ಸಾಲ ತೆಗೆದುಕೊಳ್ಳುವವರೆಲ್ಲರೂ ಬೆಳೆ ವಿಮೆಗಾಗಿ ವಿಮೆಯನ್ನು ತುಂಬಿರುತ್ತಾರೆ. ಆದರೆ ದುರ್ದೈವದಿಂದ ನಮ್ಮ ಜಿಲ್ಲೆಯಲ್ಲಿ ಬರೀ ಹಾನಗಲ್ ತಾಲ್ಲೂಕಿನ ರೈತರಿಗೆ ಮಾತ್ರ ಸಿಗುವಂತಹ ಒಂದು ಅನುಕೂಲತೆ ಇದೆ. ಮಾನ್ಯ ಉದಾಸಿಯವರಿಗೆ ಇದರ ಬಗ್ಗೆ ಅನುಭವ ಇದೆ. ದಯವಿಟ್ಟು ಉಳಿದ ರೈತರಿಗೆ ಈ ಬೆಳೆ ವಿಮೆಯಿಂದ ಪರಿಹಾರವನ್ನು ಹೇಗೆ ಪಡೆದುಕೊಳ್ಳಬೇಕು ಎನ್ನುವ ಬಗ್ಗೆ ಅಷ್ಟು ಅನುಭವ ಇಲ್ಲ. ಅದಕ್ಕೆ ನೀವು ಸಂಬಂಧಿಸಿದ ಅಧಿಕಾರಿಗಳಿಗೆಲ್ಲಾ ಸೂಚಿಸಿ ಈ ಬೆಳೆ ವಿಮೆ ಪ್ರೀಮಿಯಮ್ ಯಾರು ತುಂಬಿದ್ದಾರೆ, ಅವರೆಲ್ಲರಿಗೂ ವಿಮಾ ಕಂಪನಿಯಿಂದ ಪರಿಹಾರ ಸಿಗುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಒಂದು ವೇಳೆ ಇದರಲ್ಲಿ ಸರ್ಕಾರ ತಪ್ಪಿದರೆ, ಸರ್ಕಾರವೇ ಆ ಪರಿಹಾರವನ್ನು ಕೊಡುವಂತಹ ವ್ಯವಸ್ಥೆ ಆಗಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಮಲಕರೆಡ್ಡಿಯವರು ಕೇಳುತ್ತಾರೆ, ಆನಂತರ ಒಟ್ಟಿಗೇ ಮಾನ್ಯ ಸಚಿವರು ಉತ್ತರ ಹೇಳುತ್ತಾರೆ.

ಡಾ॥ ಎ.ಬಿ.ಮಲಕರೆಡ್ಡಿ (ಯಾದಗಿರ್): ಮಾನ್ಯ ಉಪಾಧ್ಯಕ್ಷರೆ, ಸಹಕಾರಿ ಸಂಘಗಳಿಂದ ಸಾಲ ಕೊಡತಕ್ಕಂಥ ವ್ಯವಸ್ಥೆ ಮತ್ತು ಅದಕ್ಕೆ ಸ್ವಲ್ಪ ಅನುಕೂಲತೆಯನ್ನು ಮಾಡಿಕೊಡಲು ತಾವು ಸಿದ್ಧರಾಗಿದ್ದೀರಿ. ಆದರೆ ರಾಷ್ಟ್ರೀಕೃತ ಬ್ಯಾಂಕಿನಿಂದ ಸಾಲವನ್ನು ತೆಗೆದುಕೊಂಡಿದ್ದಾರಲ್ಲಾ ಅವರ ಪರಿಸ್ಥಿತಿ ಏನು? ಅದಕ್ಕೆ ತಾವೇನಾದರೂ ಆಲೋಚನೆ ಮಾಡಿದ್ದೀರೋ?

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ಉಪಾಧ್ಯಕ್ಷರೆ, ಅಲ್ಲಿಯ ಪರಿಸ್ಥಿತಿಯ ಗಂಭೀರತೆಯ ಬಗ್ಗೆ ಮಾನ್ಯ ಡಿ.ಆರ್.ಪಾಟೀಲ್ ಅವರು ಈಗಾಗಲೇ ತಮಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಬಹುಶಃ ಮುಂಗಾರಿನ ಮಳೆಯೂ ಆಗಿಲ್ಲ, ಹಿಂಗಾರಿನ ಮಳೆಯೂ ಆಗಲಿಲ್ಲ. ಆದರಿಂದ ಬಹುಶಃ 25 ಪರ್ಸೆಂಟ್ ಕೂಡ ಬಿತ್ತನೆ ಆಗಲಿಲ್ಲ. ಕೆಲವು ಜಿಲ್ಲೆಗಳಲ್ಲಿ ಅಂತೂ ಫಸಲೂ ಕೂಡ ಬರಲಿಲ್ಲ. ಈ ಒಂದು ತೊಂದರೆ ಬಹುಶಃ ಎಲ್ಲಾ ಜಿಲ್ಲೆಯೊಳಗೆ ಕೂಡ ಆಗಿದೆ. ಈ ಪರಿಸ್ಥಿತಿಗೆ ಅನುಗುಣವಾಗಿ ಈಗ ಸೊಸೈಟಿಯಿಂದ ಅನೇಕ ರೈತರೇನು ಸಾಲ ತೆಗೆದುಕೊಂಡಿದ್ದಾರೆ, ಅದನ್ನು ಮರು ಪಾವತಿ ಮಾಡಲು ಅವರ ಕಡೆಗೆ ಶಕ್ತಿ ಇಲ್ಲ. ಆ ದೃಷ್ಟಿಯಿಂದ ಈಗ ಈ ಸವಲತ್ತು ಬೇಕು ಎಂದು ಕೇಳಿರುವುದು. ಅದಕ್ಕೆ ತಾವು ವಸೂಲಾತಿಯನ್ನು ಮುಂದಕ್ಕೆ ಹಾಕಿದಿರಿ. ಬಹಳ ಸಂತೋಷ. ಬಹುಶಃ ಬಡ್ಡಿ ಮನ್ನಾ ಮಾಡಿದರೆ ಅದಕ್ಕಿಂತಲೂ ಬಹಳ ಒಳ್ಳೆಯದಾಗುತ್ತದೆ. ಏಕೆಂದರೆ ರೈತರು ಒಂದು ಸಲ ಲಾಸ್ ಆದ ಮೇಲೆ ಮರಳಿ ಅದನ್ನು ಪುನರುಜ್ಜೀವನಗೊಳಿಸಬೇಕಾದರೆ, ಮೊದಲಿನ ಸ್ಥಿತಿಗತಿಗೆ ಬರಬೇಕಾದರೆ ಮೂರು ವರ್ಷಗಳು ಬೇಕಾಗುತ್ತದೆ. ಆ

ದೃಷ್ಟಿಯಿಂದ ಆತನು ಸಾಲದ ಹೊರೆಯಿಂದ ಮುಕ್ತಿಯಾಗಬೇಕಾದರೆ ಸರ್ಕಾರದ ಸಹಾಯ ಕೂಡ ಬಹಳ ಅವಶ್ಯಕ ಇದೆ. ಅದರ ಜೊತೆಗೆ ತಾವೇನು ಬೆಳೆ ವಿಮೆ ಮಾಡಿದ್ದೀರಿ, ಅದನ್ನು ನಮ್ಮ ಬಿಜಾಪುರ ಜಿಲ್ಲೆಗೆ ಮಾಡಿದ್ದೀರಿ. ಆದರೆ ಅದು ಬಾಗಲಕೋಟೆ ಜಿಲ್ಲೆಗೆ ಬಿಟ್ಟು ಹೋಗಿದೆ ಎಂದು ನಮಗೆ ಗೊತ್ತಾಗಿರುವುದು. ಅದು ಬಿಟ್ಟು ಹೋಗಿದೆಯೋ ಇಲ್ಲವೋ ಎನ್ನುವುದನ್ನು ಸ್ವಲ್ಪ ದಯವಿಟ್ಟು ತಿಳಿಸಬೇಕು. ಮತ್ತು ಬಡ್ಡಿ ಮನ್ನಾ ಮಾಡಿದರೆ ಬಹಳ ಒಳ್ಳೆಯದು.

+ ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಡಿ.ಆರ್.ಪಾಟೀಲ್ ಅವರು ಹೇಳಿರುವಂತೆ ಹಾನಗಲ್ ತಾಲ್ಲೂಕಿಗೆ ಅದು ಸಿಕ್ಕಿರುವುದು ಖರೆ. ಮುಂಡರಗಿಗೆ ಯಾವಾಗಲೂ ಸಿಗುವುದೇ ಇಲ್ಲ. ಅದಕ್ಕೆ ಕಾರಣವೂ ಇದೆ. ಬರೇ ಮಾನ್ಯ ಉದಾಸಿಯವರು ಪ್ರಯತ್ನ ಮಾಡಿದ್ದಾರೆ ಎಂದಲ್ಲ. ಅಲ್ಲೇನು ತ್ರೆಶೋಲ್ಡ್ ಯೀಲ್ಡ್‌ನ್ನು ಅವರು ತೆಗೆದುಕೊಳ್ಳುತ್ತಾರೆ. ಅಂದರೆ ಅದರ ವ್ಯವಸ್ಥೆ ತಪ್ಪಿದೆ. ಅದು ಬದಲಾವಣೆ ಆಗಬೇಕೆಂದು ಮೊದಲಿನಿಂದ ನಮ್ಮದು ಕೇಂದ್ರ ಸರ್ಕಾರದ ಜೊತೆ ಹೋರಾಟ ಇದೆ. ಈ ಮುಂಡರಗಿಯಂತಹ ತಾಲ್ಲೂಕು, ಗದಗಿನಂತಹ ಭಾಗದಲ್ಲಿ ಶಾಶ್ವತವಾಗಿ ಬರ ಇರುವುದರಿಂದ ತ್ರೆಶೋಲ್ಡ್ ಯೀಲ್ಡ್ ಒಂದು ಎಕರೆಗೆ 50 ಕೇಜಿ ಇರುತ್ತದೆ. 51ನೆಯ ಕೇಜಿ ಬಂದರೆ ಇನ್‌ಶ್ಯೂರೆನ್ಸ್ ಸಿಗುವುದಿಲ್ಲ. ಈ ಪದ್ಧತಿ ಇದೆ. ಮತ್ತೆ ಇಡೀ ತಾಲ್ಲೂಕನ್ನು ಯೂನಿಟ್ ಆಗಿ ಇಟ್ಟಿದ್ದಾರೆ. ಹೀಗೆ ಇರುವುದರಿಂದ ಎಲ್ಲೋ ಒಂದು ಭಾಗದಿಂದ ಬಂದರೂ ಕೂಡ ಅದು ಸಿಗುವುದಿಲ್ಲ. ಈ ಪದ್ಧತಿಯಿಂದ ಅಲ್ಲಿ ಸಿಕ್ಕಿಲ್ಲ, ಅದನ್ನು ಒಪ್ಪಬೇಕಾದ್ದೇ. ಅಲ್ಲಿ ತ್ರೆಶೋಲ್ಡ್ ಯೀಲ್ಡ್ ಜಾಸ್ತಿ ಇದೆ. ಈ ಕಾರಣದಿಂದ ಅರ್ಧ ಬೆಳೆ ಬಂದರೂ ಕೂಡ, ಎಂಟಾಣೆ ಬೆಳೆ ಬಂದರೂ ಕೂಡ ಅಲ್ಲಿ ಇನ್‌ಶ್ಯೂರೆನ್ಸ್ ಸಿಕ್ಕುತ್ತದೆ. ನಮ್ಮಲ್ಲಿ ಪೂರ್ಣ ಬೆಳೆ ಇವತ್ತು ಬಂದರೂ ಕೂಡ 51 ಕೇಜಿ ಒಂದು ಎಕರೆಗೆ ಬಂದರೂ ಸಹ ನಮಗೆ ಇನ್‌ಶ್ಯೂರೆನ್ಸ್ ಸಿಗುವುದಿಲ್ಲ. ಎಕರೆಗೆ 51 ಕೇಜಿ ಶೇಂಗಾ ಬಂದರೆ ಇನ್‌ಶ್ಯೂರೆನ್ಸ್ ಸಿಗುವುದಿಲ್ಲ. ಈ ದೃಷ್ಟಿಯಿಂದ ಹಿಂದೆ ಅದು ಆಗಿಲ್ಲ. ಈ ವರ್ಷ ನಾವು ಪ್ರಾಮಾಣಿಕವಾದಂತಹ ಪ್ರಯತ್ನ ಮಾಡಿದ್ದೇವೆ. ತಮಗೂ ಸಹ ಗೊತ್ತಿದೆ, ಮೀಟಿಂಗ್‌ನಲ್ಲಿ ಹಲವಾರು ಸಂದರ್ಭದಲ್ಲಿ ನಾನು ಅಧಿಕಾರಿಗಳಿಗೆ ಹೇಳಿದ್ದೇನೆ. ಈ ಸಲ ಖಂಡಿತವಾಗಿಯೂ ಆ ಇನ್‌ಶ್ಯೂರೆನ್ಸ್ ಪದ್ಧತಿ ಪ್ರಕಾರ ತರಿಸಿ ಅದನ್ನು ರೈತರಿಗೆ ಲಾಭ ಆಗುವ ರೀತಿಯಲ್ಲಿ ನಾವು ಮಾಡುತ್ತಿದ್ದೇವೆ. ಇನ್ನು ಮಾನ್ಯ ಚಿಮ್ಮನಕಟ್ಟಿಯವರು ಕೇಳಿದ ಹಾಗೆ ಇವತ್ತು ರೈತರಿಗೆ ತೊಂದರೆ ಇದೆ. ತಮಗೂ ಗೊತ್ತಿದೆ. ಬಡ್ಡಿ ಮನ್ನಾ ಮಾಡಿ ಎಂದು ತಾವು ಕೇಳುತ್ತಿದ್ದೀರಿ. ಬಹುಶಃ ಬಡ್ಡಿ ಮನ್ನಾ ಅಥವಾ ಬೇರೆ ರೀತಿ ಮನ್ನಾ ಮಾಡುವುದಕ್ಕೆ ಕೂಡ ನಬಾರ್ಡ್‌ನವರು ಒಪ್ಪುತ್ತಿಲ್ಲ. ಈ ಕಾರಣದಿಂದ ನಾವು ಮನ್ನಾ ಮಾಡಲಿಕ್ಕೆ ಆಗುವುದಿಲ್ಲ. ಇದು ಮನ್ನಾ ಮಾಡಬೇಕಾದರೆ ನಾವು ಕೇಂದ್ರ ಸರ್ಕಾರದ ಜೊತೆ ಕುಳಿತುಕೊಂಡು ಚರ್ಚೆ ಮಾಡಿ ಮಾಡಬೇಕಾಗುತ್ತದೆ. ಅವರೂ ನಾವೂ ಸೇರಿ ಮಾತನಾಡಿ ಮಾಡಿದರೆ ಮಾತ್ರ ಇದು ಸಾಧ್ಯವಾಗುತ್ತದೆ. ಕೇವಲ

ರಾಜ್ಯ ಸರ್ಕಾರದಿಂದ ಸಾಧ್ಯವಿಲ್ಲ. ಆ ಕಾರಣದಿಂದ ಅದನ್ನು ಮನ್ನಾ ಮಾಡಲಿಕ್ಕೆ ಆಗುವುದಿಲ್ಲ. ಆದರೂ ಕೂಡ ವಸೂಲಾತಿಯನ್ನು ಮುಂದೂಡಿ ರೈತರಿಗೆ ಅನುಕೂಲ ಮಾಡುವಂತಹ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಆಮೇಲೆ ಮಾನ್ಯ ಮಲಕರೆಡ್ಡಿಯವರು ರಾಷ್ಟ್ರೀಕೃತ ಬ್ಯಾಂಕಿನ ವಿಚಾರವನ್ನು ಹೇಳಿದರು. ಬಹುಶಃ ಅದು ನಮಗೆ ಸಂಬಂಧ ಇಲ್ಲ. ಸಂಬಂಧ ಇಲ್ಲದೇ ಇದ್ದರೂ ಸಹ ರಾಜ್ಯ ಸರ್ಕಾರದ ಪರವಾಗಿ ನಾವು ಹೇಳುವುದಾದರೆ, ಅದನ್ನೂ ಕೂಡ ಮುಂದೆ ಹಾಕುವಂತಹ ಪ್ರಯತ್ನ ಮಾಡುತ್ತೇವೆ. ಅವರಿಗೆ ನಬಾರ್ಡ್ ಸಾಲ ಕೊಟ್ಟಿರುವುದರಿಂದ ಇದೇ ಒಂದು ಸ್ಥಿತಿ ಅವರಿಗೇ ಅನುಕೂಲ ಆಗುತ್ತದೆ. ಈ ಕಾರಣದಿಂದ ಅದನ್ನೂ ಮಾಡುವಂತಹ ಪ್ರಯತ್ನ ನಾವು ಮಾಡುತ್ತೇವೆ.

ಶ್ರೀ ಡಿ.ಆರ್.ಪಾಟೀಲ್: ಬಡ್ಡಿ ಮನ್ನಾ ಮಾಡುವುದು ಬೇಡ. ಬಡ್ಡಿಯ ಮೇಲೆ ಬಡ್ಡಿ ಅಂದರೆ ಚಕ್ರಬಡ್ಡಿ ಬೀಳದ ಹಾಗೆ ವ್ಯವಸ್ಥೆ ಮಾಡಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಪಾಟೀಲ್‌ರವರಿಗೂ ಗೊತ್ತಿದೆ. ನಮ್ಮ ಸಹಕಾರಿ ಸಂಘದಲ್ಲಿ, ಸೀನಿಯರ್ ಕೋಆಪ್‌ರೇಟರ್ ಆಗಿ ಏಕೆ ಈ ಮಾತು ಕೇಳಿದರೋ ನನಗೆ ಗೊತ್ತಿಲ್ಲ. ನಮ್ಮಲ್ಲಿ ಚಕ್ರ ಬಡ್ಡಿಯ ಪದ್ಧತಿ ಇಲ್ಲ, ಅದು ಬೀಳುವ ಪ್ರಶ್ನೆಯೇ ಇಲ್ಲ.

ಶ್ರೀ ಡಿ.ಆರ್.ಪಾಟೀಲ್: ಈಗ ಮಾಧ್ಯಮಿಕ ಸಾಲ ಮಾಡುತ್ತೀರಲ್ಲಾ, ಅಸಲು ಬಡ್ಡಿ ಕೂಡಿಸಿ ಮಾಧ್ಯಮಿಕ ಸಾಲ ಮಾಡುತ್ತೀರಾ? ಅಸಲು ಬಡ್ಡಿ ಕೂಡಿಸುವುದಿಲ್ಲ ಅಲ್ಲವೇ?

ಶ್ರೀ ಎಸ್.ಎಸ್.ಪಾಟೀಲ್: ಮಾಡುವುದಿಲ್ಲ. ಬಡ್ಡಿ ಹಚ್ಚಿಕೊಂಡು ಮಾಡುತ್ತೇವೆ.

ಉಪಾಧ್ಯಕ್ಷರು: ಈಗ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಮೇಲೆ ಅಲ್ಪ ಕಾಲಾವಧಿ ಚರ್ಚೆ:

ಶ್ರೀ ಡಿ.ಆರ್.ಪಾಟೀಲ್: ಬಡ್ಡಿ ಹೆಚ್ಚಿಸಿ.

ಉಪಾಧ್ಯಕ್ಷರು: ಸಾಕಷ್ಟು ವಿಷಯ ಹೇಳಿದ್ದಾರೆ.

ಶ್ರೀ ಡಿ.ಆರ್.ಪಾಟೀಲ್: ಬಡ್ಡಿ ಹಚ್ಚಿಸಿ ಮಾಧ್ಯಮಿಕ ಸಾಲವನ್ನು ಮಾಡಬೇಕಾಗುತ್ತದೆಯೇ ಎಂದು ಕೇಳುವುದು. ಬಡ್ಡಿ ಹಚ್ಚುವುದಕ್ಕೂ ರೈತರಿಗೆ ಶಕ್ತಿ ಇಲ್ಲ. ಅದಕ್ಕೇ ಬಡ್ಡಿ ಹಚ್ಚುವುದನ್ನೂ ಸಹ ಮುಂದುವರಿಸಬೇಕು.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಸಭಾಧ್ಯಕ್ಷರೆ, ಇದು ಅವರಿಗೂ ಗೊತ್ತಿದೆ. ಸುಮ್ಮನೇ ಪ್ರಶ್ನೆ ಹಾಗೆ ಕೇಳುತ್ತಿದ್ದಾರೆ. ಅವರು ಸೀನಿಯರ್ ಕೋಆಪರೇಟರ್. ಎಲ್ಲಾ ಸೊಸೈಟಿಯ ವಿಚಾರ ಅವರಿಗೆ ಗೊತ್ತು. ನಬಾರ್ಡ್ ನಿಯಮದ ಪ್ರಕಾರ ನಾವು ಹೋಗಬೇಕಾಗುತ್ತದೆ. ನಬಾರ್ಡ್‌ನವರು ಬಡ್ಡಿ ಹಚ್ಚಿಕೊಂಡು ಕನ್‌ವರ್ಷನ್ ಮಾಡಿ

ಎಂದು ಹೇಳುತ್ತಿದ್ದಾರೆ. ಅವರು ಹೇಳಿದ ಹಾಗೆ ಬಡ್ಡಿ ಹಚ್ಚುವಂತಹ ಶಕ್ತಿ ಸಹ ರೈತರಲ್ಲಿಲ್ಲ. ಆ ಕಾರಣದಿಂದ ನಬಾರ್ಡ್‌ನವರ ಕೂಡ ಮಾತನಾಡಿಕೊಂಡು ಬಡ್ಡಿ ಕೊಡುವುದನ್ನು ಸಹ ಪೋಸ್ಟ್ ಪೋನ್ ಮಾಡಿಸುವುದು; ಇನ್‌ಕ್ಲೂಡಿಂಗ್ ಬಡ್ಡಿ ಮಾಡಿಸುವುದಿಲ್ಲ. ಬಡ್ಡಿ ಪೋಸ್ಟ್ ಪೋನ್ ಮಾಡಿ ಕನ್‌ವರ್ಷನ್ ಮಾಡುವಂತಹ ಪ್ರಯತ್ನ ಮಾಡುತ್ತೇವೆ.

(6) ಅಲ್ಪಕಾಲಾವಧಿ ಚರ್ಚೆ

ವಿಷಯ: ರೈತರ ಪಂಪ್‌ಸೆಟ್‌ಗಳಿಗೆ ಒಂದು ಹಾರ್ಸ್ ಪವರ್‌ಗೆ 300 ರೂ ಮುಂದುವರಿಸುವ ಬಗ್ಗೆ.

+ ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಉಪಾಧ್ಯಕ್ಷರೆ, ಅನೇಕ ಪ್ರಶ್ನೆಗಳನ್ನು ನಾನು ಇಲ್ಲಿ ಕೇಳಿದೆ. ವಿದ್ಯುತ್ ಜನರೇಷನ್‌ಗೂ ವಿದ್ಯುತ್ ವಿತರಣೆಗೂ ಬಂದಿರುವಂತಹ ಸಮಸ್ಯೆಯಿಂದಾಗಿ ಅನೇಕ ವಿದ್ಯುತ್ ವೈಫಲ್ಯಗಳು ಬರುತ್ತಿವೆ. ಈ ವಿದ್ಯುತ್ ವೈಫಲ್ಯಗಳಿಂದಲೇ ಅನೇಕ ರೀತಿಯಲ್ಲಿ ಮಾರ್ಚ್ ತಿಂಗಳಲ್ಲಿಯೇ ಷಟ್‌ಡೌನ್ ಆರಂಭವಾಗಿದೆ. ಜನರು ಇವತ್ತು ತತ್ತರಿಸುತ್ತಿದ್ದಾರೆ. ಅಂತಹ ಸಂದರ್ಭದಲ್ಲಿ ರೈತರ ಬವಣೆ ಏನು ಎಂದು ಒಂದು ದೊಡ್ಡ ಪ್ರಶ್ನೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಜನವರಿಯಿಂದ ಮಾರ್ಚ್ ತನಕ, ಸಾಧಾರಣವಾಗಿ ಮೇ ತನಕ ಮಾತ್ರ ದಿವಸಕ್ಕೆ ನಾಲ್ಕು ಗಂಟೆ ಮಾತ್ರ ರೈತರು ಪಂಪಿಂಗ್‌ಗೋಸ್ಕರ ವಿದ್ಯುತ್ ಅನ್ನು ಉಪಯೋಗ ಮಾಡುತ್ತಿದ್ದಾರೆ. ಹೀಗಿದ್ದರೂ ಕೂಡ ಈ ವಿದ್ಯುತ್ ವೈಫಲ್ಯದಿಂದ, ಷಟ್ ಡೌನ್‌ಗಳಿಂದಾಗಿ ಅವರಿಗೆ ಸರಿಯಾಗಿ ವಿದ್ಯುತ್ತನ್ನು ಉಪಯೋಗ ಮಾಡಲು ಸಾಧ್ಯವಾಗುತ್ತಿಲ್ಲ. ಅಂತಹ ಸಂದರ್ಭದಲ್ಲಿ ಕೂಡ ಸನ್ಮಾನ್ಯ ನಾಣಯ್ಯನವರು ಏನು ಹೇಳಿದ್ದಾರೆ, ಎಂದರೆ ಪಂಪ್‌ಸೆಟ್ ಮೇಲೆ 500 ರೂಪಾಯಿ ಏರಿಸುವಂತಹದು ಮತ್ತು ಮೀಟರನ್ನು ಅಳವಡಿಸುವಂತಹದ್ದು. ಈ ಎರಡರ ಬಗ್ಗೆ ನಮ್ಮ ಜಿಲ್ಲೆಯಿಂದ ಸ್ಪಷ್ಟವಾದ ವಿರೋಧವನ್ನು ನಾವು ವ್ಯಕ್ತ ಪಡಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಸರ್ಕಾರದ ಗಮನವನ್ನು ಸೆಳೆಯುವುದು ಅಂದರೆ ಕೃಷಿಗೆ ಹಿಂದೆ ಯಾವ ರೀತಿ ಒಂದು ಹಾರ್ಸ್ ಪವರ್‌ಗೆ 300 ರೂಪಾಯಿ ಎಂದು ನಿಗದಿ ಪಡಿಸಿದ್ದರೋ ಅದೇ ದರವನ್ನು ಮುಂದುವರಿಸಬೇಕು ಮತ್ತು ಯಾವುದೇ ರೀತಿಯಲ್ಲಿ 500 ರೂಪಾಯಿಗಳನ್ನು ಇಲ್ಲಿ ಅಳವಡಿಸಬಾರದು ಎಂಬ ಒತ್ತಾಯವನ್ನು ಕೂಡ ಈ ಸಂದರ್ಭದಲ್ಲಿ ನಾನು ಮಾಡಲಿಕ್ಕೆ ಇಚ್ಛಿಸುತ್ತೇನೆ.

+ ಶ್ರೀ ಡಿ.ವಿ.ಸದಾನಂದ ಗೌಡ (ಪುತ್ತೂರು): ಮಾನ್ಯ ಉಪಾಧ್ಯಕ್ಷರೆ, ಈ ವಿಚಾರದ ಬಗ್ಗೆ ಈಗಾಗಲೇ ಪ್ರಸ್ತಾಪ ಆಗಿದೆ. ನಮಗೆಲ್ಲಾ ಗೊತ್ತಿರುವ ಹಾಗೆ ಕೆ.ಇ.ಬಿ ಯೂನಿಟ್‌ಗೆ 1.45ರ ಪ್ರಕಾರ ಮೀಟರ್ ಹಾಕಿ.